**ಓ.ಎಸ್.ನಂ. 294/2015**

**ಪಿ.ಡಬ್ಲ್ಯು:2**

ದಿನಾಂಕಃ 16-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಬಿ ಆರ್ ಪ್ರತಿವಾದಿ ಪರ ವಕೀಲರಿಂದಃ-**

ದಾವಾ ಸ್ವತ್ತಿನ ಸ.ನಂ. ತಿಳಿದಿರುವುದಿಲ್ಲ. ದಾವಾ ಸ್ವತ್ತುಗಳನ್ನು ನೋಡಿರುತ್ತೇನೆ. 3 ಜಮೀನು ಮತ್ತು 1 ಮನೆಗೆ ದಾವೆ ಹೂಡಲಾಗಿರುತ್ತದೆ. ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿದೆ ಎಂದು ತಿಳಿದಿರುವುದಿಲ್ಲ. ತಿಮ್ಮಪ್ಪ ರವರಿಗೆ ಗೋವಿಂದಪ್ಪ ಮತ್ತು ರಂಗಪ್ಪ ಎಂದು ಇಬ್ಬರು ಮಕ್ಕಳು. ರಂಗಪ್ಪನ ಮಗಳು ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಸದರಿ ರಂಗಪ್ಪನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಗೋವಿಂದಪ್ಪ ರವರಿಗೆ 3 ಜನ ಮಕ್ಕಳು. ನಾನು ಜನಿಸಿದಾಗಿನಿಂದ ನಾಗರಾಳಿನಲ್ಲಿ ವಾಸ ಇದ್ದೇನೆ. ತಿಮ್ಮಪ್ಪ ಮತ್ತು ಗೋವಿಂದಪ್ಪ ರನ್ನು ನೋಡಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯ ತಂದೆಯಂದಿರು 30 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ಗೋವಿಂದಪ್ಪ ಮತ್ತು ರಂಗಪ್ಪನ ಮಕ್ಕಳು ಬೇರೆ ಬೇರೆ ಮನೆಯಲ್ಲಿ ವಾಸ ಇದ್ದಾರೆ. ಕಳೆದ 6-7 ವರ್ಷಗಳಿಂದ ಬೇರೆ ಬೇರೆ ವಾಸ ಇದ್ದಾರೆ. ಗೋವಿಂದಪ್ಪ ಮತ್ತು ತಿಮ್ಮಪ್ಪ ರವರ ಮನೆಯ ವ್ಯವಹಾರದ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವಾ ಸ್ವತ್ತಿನ ಖಾತೆಗಳು ಯಾರ ಹೆಸರಿನಲ್ಲಿ ಖಾತೆಗಳಿವೆ ಎಂದು ನನಗೆ ತಿಳಿದಿರುವುದಿಲ್ಲ.

ದಾವಾ ಸ್ವತ್ತಿನಲ್ಲಿ 4 ಎಕರೆ ದರಕಾಸ್ತು ಮುಖಾಂತರ ಬಂದಿರುತ್ತದೆ. ಸದರಿ ಸ್ವತ್ತು ಗೋವಿಂದಪ್ಪ ರವರಿಗೆ ದರಕಾಸ್ತು ಮುಖಾಂತರ ಬಂದಿರುತ್ತದೆ. ಉಳಿದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು. 1 ನೇ ಪ್ರತಿವಾದಿ 2 ನೇ ಪ್ರತಿವಾದಿ ತಿಮ್ಮಪ್ಪ ರವರಿಗೆ 1 ಮತ್ತು 2 ನೇ ಸ್ವತ್ತನ್ನು ನೊಂದಾಯಿತ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟ ಬಗ್ಗೆ ತಿಳಿದಿರುವುದಿಲ್ಲ. ಐಟಂ ನಂ. 1 ಮತ್ತು 2 ರಲ್ಲಿ ತಿಮ್ಮಪ್ಪ ರವರು ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯೇ ಪೂರ್ಣ ಸ್ವತ್ತಿನಲ್ಲಿ ಸ್ವಾಧೀನ ಇದ್ದಾರೆ ಎಂದು ನುಡಿಯುತ್ತಾರೆ. ಐಟಂ ನಂ. 3 ಸ್ವತ್ತು 4 ಎಕರೆ 2 ನೇ ಪ್ರತಿವಾದಿಯ ತಂದೆಗೆ ಮಂಜೂರಾದ ಸ್ವತ್ತು ಎಂದರೆ ಸರಿ. ಐಟಂ ನಂ. 3 ರ ಸ್ವತ್ತಿನಲ್ಲಿ 2 ನೇ ಪ್ರತಿವಾದಿ ಮತ್ತು ಆತನ ಸಹೋದರರು ಉಳುಮೆ ಮಾಡುತಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ರಂಗಪ್ಪನು ಸಹ ಉಳುಮೆ ಮಾಡುತಿದ್ದಾನೆ ಎಂದು ನುಡಿಯುತ್ತಾರೆ. ದಿಃ 13-07-1978 ರಲ್ಲಿ ರಂಗಪ್ಪ 1000/- ಪಡೆದು ನೊಂದಾಯಿತ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟ ನಂತರ 2 ನೇ ಪ್ರತಿವಾದಿ ಮಾತ್ರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಗೋವಿಂದಪ್ಪ ರವರು ತೀರಿಕೊಂಡ ನಂತರ 3 ನೇ ಐಟಂ ಸ್ವತ್ತನ್ನು ಅವರ ಮಕ್ಕಳು ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗೋವಿಂದಪ್ಪ ಮತ್ತು ರಂಗಪ್ಪ ನ ನಡುವೆ ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. ದಾವೆಯಲ್ಲಿ ತೋರಿಸಿರುವ ಮನೆಯಲ್ಲಿ ರಂಗಪ್ಪ ವಾಸ ಇದ್ದಾರೆ. 2 ನೇ ಪ್ರತಿವಾದಿ ಮತ್ತು ಆತನ ಸಹೋದರರು ಬೇರೆ ಬೇರೆ ಮನೆ ಕಟ್ಟಿಕೊಂಡು ವಾಸ ಇದ್ದಾರೆ.



ದಾವಾ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ

ಸರಿಯಲ್ಲ. 2 ನೇ ಪ್ರತಿವಾದಿಯ ಮೇಲೆ ನನಗೆ ದ್ವೇಷ ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆಂದರೆ ಸರಿಯಲ್ಲ. ನಾನು ನಾಗರಾಳಿನಲ್ಲಿ ಗುಡಿಗೌಡರಾಗಿದ್ದೆ ಎಂದರೆ ಸರಿ. ಈಗ 2 ನೇ ಪ್ರತಿವಾದಿ ಗುಡಿಗೌಡರಾಗಿದ್ದಾರೆ ಎಂದರೆ ಸರಿ. ನಾನು ಗುಡಿಗೌಡರಾಗಿದ್ದಾಗ ಹಣ ದುರುಪಯೋಗ ಪಡಿಸಿಕೊಂಡಿದ್ದೇನೆಂದು ಜನರು ನನ್ನನ್ನು ತೆಗೆದು 2 ನೇ ಪ್ರತಿವಾದಿಯನ್ನು ಗುಡಿಗೌಡರನ್ನಾಗಿ ಮಾಡಿದ್ದಾರೆಂದರೆ ಸರಿಯಲ್ಲ. ನನ್ನನ್ನು ಗುಡಿಗೌಡರಾಗಿ ತೆಗೆದ ಕಾರಣ ಆತನ ವಿರುದ್ದ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆಂದರೆ ಸರಿಯಲ್ಲ. ಗೋವಿಂದಪ್ಪ ಮತ್ತು ರಂಗಪ್ಪನ ನಡುವೆ ಯಾವುದೇ ವಿಭಾಗವಾಗುವ ಸ್ವತ್ತುಗಳು ಬಾಕಿ ಉಳಿದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
**2 ನೇ.ಹೆ.ಪ್ರಃದಃನ್ಯಾಃದಂ.,ರವರು,**
**ಕಡೂರು.**